KACD410007122024

**ಹಿರಿಯ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಹೊಳಲ್ಕೆರೆ.**

**ಉಪಸ್ಥಿತರು**

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

**ದಿನಾಂಕ 16 ನೇ ಏಪ್ರಿಲ್, 2026**

**ಸಿ.ಸಿ. ಸಂಖ್ಯೆ-185/2024**

ಫಿರ್ಯಾದಿ: ರಾಜ್ಯದ ಪರವಾಗಿ, ಹೊಳಲ್ಕೆರೆ ಪೊಲೀಸ್ ಠಾಣೆ.

(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

**-ವಿರುದ್ಧ-**

ಆರೋಪಿತರು: ರಂಗಸ್ವಾಮಿ ಹೆಚ್.ಹೆಚ್.
ಬಿನ್ ಹಾಲಪ್ಪ,
ವಯಸ್ಸು ಸುಮಾರು 35 ವರ್ಷ,
ಉದ್ಯೋಗಃ ವ್ಯವಸಾಯಗಾರರು,
ವಾಸಃ ಗುಡ್ಡದ ಸಂತೇನಹಳ್ಳಿ ಗ್ರಾಮ,
ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ.

(ಪ್ರತಿನಿಧಿಸುವವರುಃ ಶ್ರೀ ಕೆ. ರವಿ, ನ್ಯಾಯವಾದಿಗಳು)

* * * * *

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 31.01.2024 |
| 2 | ಅಪರಾಧ ವರದಿಯಾದ ದಿನಾಂಕ | 06.02.2024 |
| 3 | ಆರೋಪಿತರನ್ನು ಬಂಧಿಸಿದ ದಿನಾಂಕ | - |
| 4 | ಫಿರ್ಯಾದಿಯ ಹೆಸರು | ಪರಮೇಶ್ವರಪ್ಪ |
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 02.04.2026 |
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 02.04.2026 |
| 7 | ಆರೋಪಿಸಲಾದ ಅಪರಾಧಗಳು | ಭಾರತೀಯ ದಂಡ ಸಂಹಿತೆ ಕಲಂ 447, 504, 323, 324, 506 |
| 8 | ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರು ನಿರಪರಾಧಿ |

*****

**ತೀರ್ಪು**

ಆರೋಪಿತರ ವಿರುದ್ಧ ಪೊಲೀಸ್ ಉಪ ನಿರೀಕ್ಷಕರು, ಹೊಳಲ್ಕೆರೆ ಪೊಲೀಸ್ ಠಾಣೆ, ಹೊಳಲ್ಕೆರೆರವರು ದೋಷಾರೋಪಣಾ ಪತ್ರವನ್ನು ಸಲ್ಲಿಸಿ, ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 447, 504, 323, 324, 506 ಅಪರಾಧಗಳ ಅಡಿಯಲ್ಲಿ ಕೃತ್ಯವೆಸಗಿದ್ದಾರೆಂದು ಆರೋಪಿಸಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆಃ-

ಚಾಸಾ-1 ರವರ ತಂದೆಯ ಹೆಸರಿನಲ್ಲಿರುವ ಚಾಸಾ-1 ರವರ ಭಾಗಕ್ಕೆ ಬಂದಿರುವ ಸರ್ವೆ ನಂ.41/2 ರ ಜಮೀನಿನ ಪಕ್ಕದ ಜಮೀನಿನವರಾದ ಆರೋಪಿತರು ಆಗಾಗ್ಗೆ ತಮ್ಮ-ತಮ್ಮ ಜಮೀನಿನಲ್ಲಿ ಇರುವ ಅಡಿಕೆ ಮತ್ತು ತೆಂಗಿನ ತೋಟದ ಗಿಡಗಳಿಗೆ ನೀರು ಬಿಡುವ ವಾಲ್ ಗಳನ್ನು ತಿರುವಿಕೊಳ್ಳುವ ವಿಚಾರದಲ್ಲಿ, ಆಗಾಗ್ಗೆ ಬಾಯಿಮಾತಿನ ಜಗಳವನ್ನು ಮಾಡುತ್ತಿದ್ದು, ಚಾಸಾ-1 ರವರು ಸುಧಾರಿಸಿಕೊಂಡು ಹೋಗುತ್ತಿದ್ದು, ಹೀಗಿರುವಾಗ ದಿನಾಂಕ 31.01.2024 ರಂದು ಮಧ್ಯಾಹ್ನ 3.45 ಗಂಟೆ ಸಮಯದಲ್ಲಿ, ಹೊಳಲ್ಕೆರೆ ತಾಲ್ಲೂಕು ಗುಡ್ಡದ ಸಾಂತೇನಹಳ್ಳಿ ಗ್ರಾಮದ ಚಾಸಾ-1 ರವರು ತಮ್ಮ

ಸರ್ವೇ ನಂ.41/2 ರ ಜಮೀನಿನ ತೋಟದಲ್ಲಿ ಕೆಲಸ ಮಾಡುತ್ತಿರುವಾಗ, ಆರೋಪಿತರು ಚಾಸಾ-1 ರವರ ಜಮೀನಿನೊಳಗೆ ಅಕ್ರಮವಾಗಿ ಪ್ರವೇಶ ಮಾಡಿ, ಚಾಸಾ-1 ರವರ ಹತ್ತಿರ ಜಗಳ ತೆಗೆದು, ಚಾಸಾ-1 ರವರನ್ನು ಕುರಿತು ಸೂಳೆಮಗನೇ, ಬೋಳಿಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಚಾಸಾ-1 ರವರನ್ನು ಹಿಡಿದು ಎಳೆದಾಡಿ, ಚಾಸಾ-1 ರವರ ಎದೆಗೆ ಮೈಕೈಗೆ ನೋವುಂಟುಮಾಡಿದ್ದು, ಅಲ್ಲೇ ಬಿದ್ದಿದ್ದ ಒಂದು ಕಲ್ಲನ್ನು ತೆಗೆದುಕೊಂಡು ಚಾಸಾ-1 ರವರ ಎಡಮೊಣಕಾಲಿಗೆ ಹೊಡೆದಿದ್ದು, ಚಾಸಾ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟುಪಡಿಸಿದ್ದು ಹಾಗೂ ಚಾಸಾ-1 ರವರನ್ನು ಆರೋಪಿತರು ಹಿಡಿದು ಎಳೆದಾಡಿದಾಗ, ಚಾಸಾ-1 ರವರ ಶರ್ಟ್ ಜೇಬಿ ನಲ್ಲಿದ್ದ ಮೊಬೈಲ್ ಕೆಳಗೆ ಕಲ್ಲಿಗೆ ಬಿದ್ದು, ಮೊಬೈಲ್ ಹೊಡೆದು ಹೋಗಿದ್ದು, ಆರೋಪಿತನು ಚಾಸಾ-1 ರವರನ್ನು ಕುರಿತು ನೀನು ಒಬ್ಬನೇ ಸಿಗು, ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ಆರೋಪಿಸಲಾಗಿದೆ.

3. ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿದ ನಂತರ ಆರೋಪಣಾ ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿತರು ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅಡಿಯಲ್ಲಿ ದೋಷಾರೋಪಣಾ ಪತ್ರದ ನಕಲುಗಳನ್ನು ಪೂರೈಸಲಾಯಿತು. ತದನಂತರ ಆರೋಪಿತರ ವಿರುದ್ಧ ಆಪಾದನೆಯನ್ನು ರಚಿಸಿ, ಅವರಿಗೆ ಓದಿ ಹೇಳಿ ವಿವರಿಸಲಾಗಿ, ಆರೋಪಿತರು ತಪ್ಪು ಮಾಡಿಲ್ಲವೆಂದು ಹೇಳಿದ್ದ ರಿಂದ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ಹಾಕಿಕೊಳ್ಳಲಾಗಿತ್ತು.

4. ಆರೋಪಿತರ ವಿರುದ್ಧದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣಾ ಪತ್ರದಲ್ಲಿ, ಒಟ್ಟು 7 ಜನ ಸಾಕ್ಷಿದಾರರನ್ನು ನಮೂದಿಸಲಾಗಿದ್ದು, ಫಿರ್ಯಾದುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಚಾಸಾ-2 ರಿಂದ 7 ರವರನ್ನು ಸಾಕ್ಷ್ಯದ ವಿಚಾರಣೆಯಿಂದ ಕೈ ಬಿಡಲಾಗಿದೆ. ಈ ಮೇಲ್ಕಂಡ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ರಿಂದ 3 ರಂತೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ.

5. ಆರೋಪಿತರ ವಿರುದ್ಧದ ಆರೋಪಗಳನ್ನು ರುಜುವಾತುಪಡಿಸುವಂತಹ ಯಾವುದೇ ಮೌಖಿಕ ಹಾಗೂ ದಾಖಲೆಗಳ ಸಾಕ್ಷಾಧಾರಗಳು ಈ ಪ್ರಕರಣದಲ್ಲಿ ಕಂಡುಬರದಿದ್ದ ಕಾರಣ, ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಅಡಿಯಲ್ಲಿ ಆರೋಪಿತರ ವಿರುದ್ಧ ಅಭಿಯೋಜನೆ ಪಕ್ಷದ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಬಗ್ಗೆ ಪ್ರಶ್ನಿಸುವ ಹಂತವನ್ನು ಕೈಬಿಡಲಾಗಿದೆ.

6. ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರ ಅಡಿಯಲ್ಲಿನ ಪ್ರಕ್ರಿಯೆಯಂತೆ ಜಾಮೀನಿನ ಭದ್ರತೆಯನ್ನು ನೀಡಿರುತ್ತಾರೆ.

7. ಉಭಯ ಪಕ್ಷಗಳ ವಾದ-ವಿವಾದಗಳನ್ನು ಆಲಿಸಲಾಯಿತು. ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

8. ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಶೀಲನೆಗೆ ಉದ್ಭವಿಸಿರುತ್ತವೆಃ-

1. ಚಾಸಾ-1 ರವರ ತಂದೆಯ ಹೆಸರಿನಲ್ಲಿರುವ ಚಾಸಾ-1 ರವರ ಭಾಗಕ್ಕೆ ಬಂದಿರುವ ಸರ್ವೇ ನಂ.41/2 ರ ಜಮೀನಿನ ಪಕ್ಕದ ಜಮೀನವರಾದ ಆರೋಪಿತರು ಆಗಾಗ್ಗೆ, ತಮ್ಮ-ತಮ್ಮ ಜಮೀನಿನಲ್ಲಿರುವ ಅಡಿಕೆ ಮತ್ತು ತೆಂಗಿನ ತೋಟದ ಗಿಡಗಳಿಗೆ ನೀರು ಬಿಡುವ ವಾಲ್‌ಗಳನ್ನು ತಿರುವಿಕೊಳ್ಳುವ ವಿಚಾರದಲ್ಲಿ, ಆಗಾಗ್ಗೆ ಬಾಯಿಮಾತಿನ ಜಗಳವನ್ನು ಮಾಡುತ್ತಿದ್ದು, ಚಾಸಾ-1 ರವರು ಸುಧಾರಿಸಿಕೊಂಡು ಹೋಗುತ್ತಿದ್ದು, ಹೀಗಿರುವಾಗ ದಿನಾಂಕ 31.01.2024 ರಂದು ಮಧ್ಯಾಹ್ನ 03.45 ಗಂಟೆ ಸಮಯದಲ್ಲಿ, ಹೊಳಲ್ಕೆರೆ ತಾಲ್ಲೂಕು, ಗುಡ್ಡದ ಸಾಂತೇನಹಳ್ಳಿ ಗ್ರಾಮದ ಚಾಸಾ-1 ರವರು ತಮ್ಮ ಸರ್ವೇ ನಂ.41/2 ರ ಜಮೀನಿನ ತೋಟದಲ್ಲಿ ಕೆಲಸ ಮಾಡುತ್ತಿರುವಾಗ, ಆರೋಪಿತರು ಚಾಸಾ-1 ರವರ ಜಮೀನಿನೊಳಗೆ ಅಕ್ರಮವಾಗಿ ಪ್ರವೇಶ ಮಾಡಿರುವ ಕಾರಣ, ಆರೋಪಿತರು ಭಾರತೀಯ

ದಂಡ ಸಂಹಿತೆ ಕಲಂ 447 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

2. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರು ಚಾಸಾ-1 ರವರನ್ನು ಕುರಿತು ಸೂಳೆಮಗನೇ, ಬೋಳಿಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿರುವ ಕಾರಣ, ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 504 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

3. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರು ಚಾಸಾ-1 ರವರನ್ನು ಹಿಡಿದು ಎಳೆದಾಡಿ, ಚಾಸಾ-1 ರವರ ಎದೆಗೆ, ಮೈಕೈಗೆ ನೋವುಂಟು ಮಾಡಿದ್ದು, ಚಾಸಾ-1 ರವರ ಶರ್ಟನ್ನು ಹಿಡಿದು ಎಳೆದಾಡಿರುವುದರಿಂದ ಚಾಸಾ-1 ರವರ ಶರ್ಟ್ ಜೇಬಿನಲ್ಲಿದ್ದ ಮೊಬೈಲ್ ಕೆಳಗೆ ಬಿದ್ದು, ಒಡೆದು ಹೋಗಿರುವ ಕಾರಣ, ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 323 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

4. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರು ಅಲ್ಲೇ ಬಿದ್ದಿದ್ದ ಒಂದು ಕಲ್ಲನ್ನು ತೆಗೆದುಕೊಂಡು ಚಾಸಾ-1 ರವರ ಎಡಮೊಣಕಾಲಿಗೆ ಹೊಡೆದಿದ್ದು, ಚಾಸಾ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟುಪಡಿಸಿರುವ ಕಾರಣ, ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 324 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು

ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿ ದ್ದಾರೆಯೇ ?

5. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರು ಚಾಸಾ-1 ರವರನ್ನು ಕುರಿತು ನೀನು ಒಬ್ಬನೇ ಸಿಗು, ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುವ ಕಾರಣ, ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿ ದ್ದಾರೆಯೇ ?

6. ಹಾಗಿದ್ದರೆ ಯಾವ ಆಜ್ಞೆ ?

9. ಈ ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೆಃ-

| | | |
|---|---|---|
| ಅಂಶ-1 | : | ನಕಾರಾತ್ಮಕವಾಗಿ, |
| ಅಂಶ-2 | : | ನಕಾರಾತ್ಮಕವಾಗಿ, |
| ಅಂಶ-3 | : | ನಕಾರಾತ್ಮಕವಾಗಿ, |
| ಅಂಶ-4 | : | ನಕಾರಾತ್ಮಕವಾಗಿ, |
| ಅಂಶ-5 | : | ನಕಾರಾತ್ಮಕವಾಗಿ, |
| ಅಂಶ-6 | : | ಅಂತಿಮ ಆದೇಶದಂತೆ. |

## ಕಾ ರ ಣ ಗ ಳು

**10. ಅಂಶ-1 ರಿಂದ 5:-** ಈ ಐದು ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದ ಹಾಗೂ ಈ ಅಂಶಗಳಿಗೆ ನೀಡುವಂತಹ ಕಾರಣಗಳು ಒಂದೇ ಆಗಿರುವುದರಿಂದ, ವಿಷಯದ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಈ ಐದು ಅಂಶಗಳನ್ನು ಜೊತೆಗೂಡಿಸಿ ಒಟ್ಟಿಗೆ ಚರ್ಚಿಸಿರುತ್ತೇನೆ.

11. ಈ ಮೇಲ್ಕಂಡ ಅಂಶಗಳ ಕುರಿತಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣಾ ಪತ್ರದಲ್ಲಿ, ಒಟ್ಟು 7 ಜನ ಸಾಕ್ಷಿದಾರರನ್ನು ನಮೂದಿಸಲಾಗಿದ್ದು, ಫಿರ್ಯಾದುದಾರರಾದ ಚಾಸಾ-1 ರವರನ್ನು ಪ್ರಾ.ಸಾ-1 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಚಾಸಾ-2 ರಿಂದ 7 ರವರನ್ನು ಸಾಕ್ಷ್ಯದ ವಿಚಾರಣೆಯಿಂದ ಕೈ ಬಿಡಲಾಗಿದೆ. ಈ ಮೇಲ್ಕಂಡ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ರಿಂದ 3 ರಂತೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ.

12. ಈ ಪ್ರಕರಣದ ಫಿರ್ಯಾದುದಾರರಾದ ಚಾಸಾ-1 ರವರನ್ನು ಪ್ರಾ.ಸಾ-1 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಸಾಕ್ಷಿದಾರರು ತನ್ನ ಮುಖ್ಯ ವಿಚಾರಣೆಯಲ್ಲಿ, ತನ್ನ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲವೆಂದು, ಆರೋಪಿತರು ತನಗೆ ಯಾವುದೇ ತೊಂದರೆ ನೀಡಿಲ್ಲವೆಂದು, ಈ ಪ್ರಕರಣದ ಕುರಿತು ತಾನು ಯಾವುದೇ ದೂರನ್ನು ನೀಡಿರುವುದಿಲ್ಲವೆಂದು, ತನ್ನ ಸಮಕ್ಷಮ ಯಾವುದೇ ಮಹಜರನ್ನು ಮಾಡಿಲ್ಲವೆಂದು, ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲವೆಂದು ಮತ್ತು ಈ ಕುರಿತು ತನಿಖಾಧಿಕಾರಿಗೆ ಯಾವುದೇ ಮರು ಹೇಳಿಕೆಯನ್ನು ನೀಡಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ, ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀಸವಾಲು ಮಾಡಿದ್ದಾಗ್ಯೂ ಕೂಡ, ಮೇಲ್ಕಂಡ ಅಂಶಗಳನ್ನು ಹೊರತುಪಡಿಸಿ ಇತರೆ ಯಾವುದೇ ಅಂಶಗಳನ್ನು ಅಭಿಯೋಜನೆಗೆ ಪೂರಕವಾಗಿ ಪಡೆದಿರುವುದಿಲ್ಲ. ಸದರಿ ಸಾಕ್ಷಿಯು ಮುಂದುವರೆದು ತಾನು ಮತ್ತು ಆರೋಪಿತರು ಸಂಬಂಧಿಕರಾಗಿದ್ದು ಮತ್ತು ತಮ್ಮಗಳ ನಡುವೆ ಎದುರು ದೂರುಗಳು ದಾಖಲಾಗಿರುವ ಕಾರಣ, ಈಗ ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆಂದು ನುಡಿದಿರುತ್ತಾರೆ.

13. ಈ ಮೇಲ್ಕಂಡ ಅಭಿಯೋಜನೆಯ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ರಂತೆ ಪ್ರಾ.ಸಾ-1 ರವರು ದಿನಾಂಕ 06.02.2024 ರಂದು ಆರೋಪಿತರು ತನಗೆ ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿ, ಕೊಲೆ ಬೆದರಿಕೆ ಹಾಕಿರುತ್ತಾರೆಂದು ನೀಡಿದ ಗಣಕೀಕೃತ ದೂರು ಆಗಿರುತ್ತದೆ. ನಿಪಿ-2 ರಂತೆ ಸ್ಥಳ ಮಹಜರನ್ನು ಹಾಜರು

ಪಡಿಸಿರುತ್ತಾರೆ. ನಿಪಿ-3 ರಂತೆ ಪ್ರಾಸಾ-1 ರವರ ಮರು ಹೇಳಿಕೆಯನ್ನು ಹಾಜರುಪಡಿಸಿರುತ್ತಾರೆ.

14. ಈ ಮೇಲ್ಕಾಣಿಸಿದ ಸಾಕ್ಷಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಈ ಪ್ರಕರಣದ ಪ್ರಮುಖ ಸಾಕ್ಷಿದಾರರಾದ ಪ್ರಾಸಾ-1 ರವರು ಫಿರ್ಯಾದುದಾರ ಸಾಕ್ಷಿದಾರರಾಗಿದ್ದು, ತನ್ನ ಸಾಕ್ಷ್ಯದಲ್ಲಿ, ತನ್ನ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲವೆಂದು, ಆರೋಪಿತರು ತನಗೆ ಯಾವುದೇ ತೊಂದರೆ ನೀಡಿಲ್ಲವೆಂದು, ಈ ಪ್ರಕರಣದ ಕುರಿತು ತಾನು ಯಾವುದೇ ದೂರನ್ನು ಮತ್ತು ಮರುಹೇಳಿಕೆಯನ್ನು ನೀಡಿರುವುದಿಲ್ಲವೆಂದು, ತನ್ನ ಸಮಕ್ಷಮ ಯಾವುದೇ ಮಹಜರನ್ನು ಮಾಡಿಲ್ಲವೆಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಈ ಅಂಶವನ್ನು ಗಮನಿಸಿದಾಗ, ಆರೋಪಿತರ ವಿರುದ್ಧ ಹೊರಿಸಿದ ಆರೋಪಗಳು ಕೇವಲ ಆರೋಪಗಳಾಗಿ ಉಳಿದಿದೆಯೇ ವಿನಃ ಸದರಿ ಆರೋಪಣೆಗಳನ್ನು ಸಾಬೀತುಪಡಿಸಿರುವುದಿಲ್ಲ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ ಅಭಿಯೋಜನೆಯು ಆರೋಪಿತರ ವಿರುದ್ಧ ಆಪಾದಿಸಿದಂತಹ ಆರೋಪಗಳನ್ನು ಸಂಶಯಾತೀತವಾಗಿ ಹಾಗೂ ಪೂರಕವಾದ ಸಾಕ್ಷಾಧಾರಗಳೊಂದಿಗೆ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಕಂಡುಬರುತ್ತದೆ.

15. ಪ್ರಸ್ತುತ ಈ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 447, 504, 323, 324, 506 ರ ಅಡಿಯಲ್ಲಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಕಂಡ ಕಲಂಗಳನ್ನು ಪರಿಶೀಲಿಸಲಾಗಿ, ಭಾರತೀಯ ದಂಡ ಸಂಹಿತೆ ಕಲಂ 447, 504, 323 ಮತ್ತು 506 ರ ಅಪರಾಧಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 320 ರ ಅಡಿಯಲ್ಲಿ ರಾಜಿಮಾಡಿಕೊಳ್ಳಬಹುದಾದ ಅಪರಾಧಗಳು ಎಂಬುದಾಗಿ ಸ್ಪಷ್ಟವಾಗಿ ಕಂಡುಬರುತ್ತದೆ. ಅಂತೆಯೆ ಪ್ರಾಸಾ-1 ರವರು ತನ್ನ ಪಾಟೀ ಸವಾಲಿನಲ್ಲಿ, ತಾನು ಹಾಗೂ ಆರೋಪಿತರು ರಾಜಿಮಾಡಿಕೊಂಡಿರುತ್ತೇವೆ ಎಂಬುದನ್ನು ಒಪ್ಪಿರುತ್ತಾರೆ. ಹಾಗಾಗಿ ಉಭಯ ಪಕ್ಷಗಾರರ ನಡುವಣ ಸೌಹಾರ್ದಯುತ ಜೀವನಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುವ ಕಾರಣ,

ಅಭಿಯೋಜನೆ ಪರ ಸಾಕ್ಷ್ಯವನ್ನು ಅಂಗೀಕರಿಸಲಾಗುತ್ತದೆ ಎಂದು ನ್ಯಾಯಾಲಯವು ತೀರ್ಮಾನಕ್ಕೆ ಬರುತ್ತದೆ.

16. ಈ ಮೇಲ್ಕಂಡಂತೆ ಪ್ರಾಸಾ-1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ, ತನ್ನ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲವೆಂದು, ಆರೋಪಿತರು ತನಗೆ ಯಾವುದೇ ತೊಂದರೆ ನೀಡಿಲ್ಲವೆಂದು, ಈ ಪ್ರಕರಣದ ಕುರಿತು ತಾನು ಯಾವುದೇ ದೂರನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ, ಅಭಿಯೋಜನೆಯು ಆರೋಪಿತರ ವಿರುದ್ಧ ಆಪಾದಿಸಿದಂತಹ ಆರೋಪಗಳನ್ನು ಸಂಶಯಾತೀತವಾಗಿ ಹಾಗೂ ಪೂರಕವಾದ ಸಾಕ್ಷಾಧಾರಗಳೊಂದಿಗೆ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಕಂಡುಬರುತ್ತದೆ. ಸದರಿ ಸಂಶಯದ ಲಾಭವನ್ನು ಮತ್ತು ಈ ಪ್ರಕರಣದ ಫಿರ್ಯಾದುದಾರ ಸಾಕ್ಷಿದಾರರಾದ ಪ್ರಾಸಾ-1 ರವರು ಆರೋಪಿತರೊಂದಿಗೆ ರಾಜಿಮಾಡಿಕೊಂಡಿರುವುದನ್ನು ತನ್ನ ಸಾಕ್ಷ್ಯದಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿರುವುದನ್ನು ಪರಿಗಣನೆಗೆ ತೆಗೆದುಕೊಂಡು, ಆರೋಪಿತರು ಬಿಡುಗಡೆ ಹೊಂದಲು ಅರ್ಹರಿರುತ್ತಾರೆಂದು ಅಭಿಪ್ರಾಯಪಟ್ಟು ಮೇಲ್ಕಾಣಿಸಿದ ಅಂಶ-1 ರಿಂದ 5 ನ್ನು ನಕಾರಾತ್ಮಕವೆಂದು ಉತ್ತರಿಸಿರುತ್ತೇನೆ.

**17. ಅಂಶ-6:-** ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ, ಈ ಕೆಳಗಿನಂತೆ ಆದೇಶಿಸಿರುತ್ತೇನೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರ ಅಡಿಯಲ್ಲಿ ಕಾರ್ಯೋನ್ಮುಖನಾಗಿ, ಆರೋಪಿತರನ್ನು ಅವರ ವಿರುದ್ಧ ಹೊರಿಸಿದ ಭಾರತೀಯ ದಂಡ ಸಂಹಿತೆ ಕಲಂ 447, 504, 323, 324, 506 ರ ಆರೋಪಗಳಿಗಾಗಿ ನಿರಪರಾಧಿ ಎಂದು ನಿರ್ಣಯಿಸಲಾಗಿದೆ.

ಈ ಪ್ರಕರಣದಲ್ಲಿ ಆರೋಪಿತರು ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು,

ಈ ತೀರ್ಪು ಉದ್ಘೋಷಿಸಿದ ದಿನದಿಂದ ಆರು ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

ಮಾಲುಪಟ್ಟಿ ಸಂಖ್ಯೆ-18/2024 ಮತ್ತು ಪಿ.ಆರ್.ಸಂಖ್ಯೆ-19/2025 ರಲ್ಲಿ ಅಮಾನತ್ತುಪಡಿಸಿಕೊಂಡಿರುವ ಒಂದು ಒಳ ಹಿಡಿ ಗಾತ್ರದ ಕಾಡುಜಾತಿಯ ಕಲ್ಲು ಬೆಲೆಬಾಳದ ವಸ್ತು ಆಗಿರುವುದರಿಂದ, ಮೇಲ್ಮನವಿ ಅವಧಿಯ ನಂತರ ನಾಶಪಡಿಸಲು ಆದೇಶಿಸಿದ್ದೇನೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 16ನೇ ಏಪ್ರಿಲ್, 2026 ರಂದು ನಾನು ಉದ್ಘೋಷಿಸಿದ್ದೇನೆ.)

(ರಘುರಾಮ ಎನ್.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

## ಅನುಬಂಧ

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:**

ಪ್ರಾಸಾ-1 : ಪರಮೇಶ್ವರಪ್ಪ

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:**

ನಿಪಿ-1 : ಗಣಕೀಕೃತ ದೂರು
ನಿಪಿ-1(ಎ) : ಪ್ರಾಸಾ-1 ರವರ ಸಹಿ
ನಿಪಿ-2 : ಸ್ಥಳ ಮಹಜರ್
ನಿಪಿ-2(ಎ) : ಪ್ರಾಸಾ-1 ರವರ ಸಹಿ
ನಿಪಿ-3 : ಪ್ರಾಸಾ-1 ರವರ ಮರು ಹೇಳಿಕೆ.

**<u>ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:</u>**

- ಇಲ್ಲ -

**<u>ಆರೋಪಿತರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:</u>**

- ಇಲ್ಲ -

(ರಘುರಾಮ ಎನ್.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.